# ಅರ್ಬನ್ ಲೈಟ್



■ ಚಿತ್ರ– ಬರಹ: **ಮಂಜುನಾಥ ಡಿ.ಎಸ್**

ಅಮೆರಿಕನ್ ಕಲಾವಿದ ಕ್ರಿಸ್ ಬರ್ಡನ್ ನಿರ್ಮಿಸಿರುವ ಈ ಅರ್ಬನ್ ಲೈಟ್, ಕಲೆಹಾಕಿದ ವಸ್ತುಗಳಿಗೆ ಹೊಸ ಆಯಾಮ ನೀಡಿ ಕಲಾಕೃತಿಯಂತಾಗಿಸಿದ ಪರಿಗೊಂದು ನಿದರ್ಶನ.

1920 ಹಾಗೂ 1930ರ ದಶಕಗಳಲ್ಲಿ ಬಳಕೆಯಲ್ಲಿದ್ದ ಹದಿನೇಳು ವಿಭಿನ್ನ ಮಾದರಿ ಬೀದಿದೀಪಗಳ 202 ಕಂಬಗಳನ್ನು ಈ ಆಕರ್ಷಕ ಕಲಾಕೃತಿಯಲ್ಲಿ ಬಳಸಿಕೊಳ್ಳಲಾಗಿದೆ. ಲಾಸ್ ಏಂಜಲಿಸ್, ಹಾಲಿವುಡ್, ಗ್ಲೆಂಡೇಲ್, ಅನಹೇಮ್, ಮತ್ತು ಪೋರ್ಟ್‌ಲೆಂಡ್‌ಗಳಲ್ಲಿದ್ದ ಈ ಕಂಬಗಳು ಎರಕ ಹೊಯ್ದ ಬೀಡು ಕಬ್ಬಿಣದಿಂದ ನಿರ್ಮಾಣಗೊಂಡಿವೆ. ಇಪ್ಪತ್ತರಿಂದ ಮೂವತ್ತು ಅಡಿ ಎತ್ತರದ, ಹದಿನೇಳು ತರಹೆಯ ಕಂಬಗಳು ಇಲ್ಲಿ ಅಡಕಗೊಂಡಿವೆ. ಅತಿ ಎತ್ತರದ ಹಾಗು ಅಲಂಕೃತ ರೋಸ್ ಪೋಲ್ಸ್ ಕಂಬಗಳನ್ನು ಲಾಸ್ ಏಂಜಲಿಸ್ ಡೌನ್ ಟೌನ್‌ನಿಂದ ತರಲಾಗಿದೆ.

ಲಾಸ್ ಏಂಜಲಿಸ್ ಕೌಂಟಿ ಮ್ಯೂಸಿಯಂ ಆಫ್ ಆರ್ಟ್ ವಿಸ್ತರಣೆಯ ಸಂದರ್ಭದಲ್ಲಿ ಅರ್ಬನ್ ಲೈಟ್ ಸ್ಥಾಪಿಸಲು ನಿರ್ಧರಿಸಲಾಯಿತು. ನಿರ್ಮಾಣಕ್ಕೆ ಮೊದಲು ಕಬ್ಬಿಣದ ಕಂಬಗಳನ್ನು ಸೂಕ್ಷ್ಮವಾಗಿ ಸ್ವಚ್ಛಗೊಳಿಸಿ, ತಿಳಿಬೂದು ಬಣ್ಣ ಲೇಪಿಸಿ, ಉತ್ಕೃಷ್ಟ ಹೊಳಪು ನೀಡುವಂತೆ ಸಿದ್ಧಗೊಳಿಸಲಾಯಿತು. ಸೂರ್ಯಶಕ್ತಿಯಿಂದ ದೀಪಗಳು ಬೆಳಗುವಂತೆ ವಿನ್ಯಾಸಗೊಳಿಸಲಾಯಿತು. 2008ರ ಫೆಬ್ರವರಿ ಏಳರಂದು ಲೋಕಾರ್ಪಣೆಗೊಂಡ ಈ ಕಂಬಸಂಗಮ ಲಾಕ್ಮಾಗೆ ಹೊಸ ರೂಪ ನೀಡಿತು. ಬೆರಗಿನ ದೀಪಗಳನ್ನು ಕಂಡು ಸಂಭ್ರಮಿಸಲು ಹಗಲಿರುಳೆನ್ನದೆ ಜನಸಾಗರ ಹರಿದು ಬಂದಿತು. ಅತ್ಯಂತ ಜನಪ್ರಿಯತೆ ಪಡೆದು ಲಾಸ್ ಏಂಜಲಿಸ್‌ನ ಪ್ರತಿಮೆಯೆನಿಸಿಕೊಂಡ ಅರ್ಬನ್ ಲೈಟ್ ಛಾಯಾಚಿತ್ರಗ್ರಾಹಕರ ಅಚ್ಚುಮೆಚ್ಚಿನ ತಾಣವಾಯಿತು.

ಈ ಸಾರ್ವಜನಿಕ ಜೋಡಣಾ ಕಲಾಕೃತಿಯನ್ನು ಅಳವಡಿಸಿಕೊಂಡ ಮೊದಲ ಚಲನಚಿತ್ರ ನೋ ಸ್ಟ್ರಿಂಗ್ಸ್ ಅಟಾಚ್ಡ್. ಗಿನ್ನೆಸ್ ಜಾಹಿರಾತೊಂದರಲ್ಲಿಯೂ ಇದು ಸ್ಥಾನ ಪಡೆಯಿತು. ತನ್ನ ಸ್ವಂತ ಪ್ರಚಾರಕ್ಕಾಗಿಯೂ ಲಾಕ್ಮಾ ಇದನ್ನು ಬಳಸಿಕೊಂಡಿತು. ಹಾಗೆಯೇ ಅರ್ಬನ್ ಲೈಟ್ ಟೀಕೆಗಳಿಗೂ ಗುರಿಯಾಯಿತು. ಇದರ ನಿರ್ಮಾತೃ ಬರ್ಡನ್‌ರ ನಿಧನದಿಂದಾಗಿ, 2015ರ ಬೇಸಿಗೆಯಲ್ಲಿ ನಿಗದಿಯಾಗಿದ್ದ ನಿರ್ವಹಣಾ ಕಾರ್ಯ ಒಂದು ವರ್ಷ ಮುಂದೂಡಲ್ಪಟ್ಟಿತು. 2016ರ ಮೇ ಹಾಗೂ ಜೂನ್ ತಿಂಗಳಲ್ಲಿ ಕತ್ತಲೆಯಾಗಿದ್ದ ಅರ್ಬನ್ ಲೈಟ್ ಈಗ ಮತ್ತೆ ದೇದೀಪ್ಯಮಾನವಾಗಿದೆ.

